ಬಿಸಿ ಏರತೊಡಗಿತು. ಪ್ರಚೋದನಕಾರಿ ಘೋಷಣೆಗಳು ಮೊಳಗಲಾರಂಭಿಸಿದವು. ಮುಂದೆ ಭಾರತದ ಒಂದೊಂದೇ ವಿಕೆಟ್‌ಗಳು ಉರುಳುತ್ತಿದ್ದಂತೆ ಒಂದಿಷ್ಟು ಹಿಂದೂ ಹುಡುಗರೂ ನವಾಯತ ಹುಡುಗರೂ ಬಡಿದಾಟಕ್ಕಿಳಿದರು. ಕೆಲವೇ ನಿಮಿಷಗಳಲ್ಲಿ ಇಡೀ ಥಿಯೇಟರ್ ರಣರಂಗವಾಯಿತು. ಎರಡೂ ಕೈ ಮೇಲಕ್ಕೆತ್ತಿ, 'ಹಿಂದೂ ಮುಸ್ಲಿಂ ಭಾಯಿ ಭಾಯಿ' ಎಂದು ಕೂಗುತ್ತ ಪೈಮಾಮ್ ಕದನೋನ್ಮಾದ ತಣಿಸಲು ಅತ್ತಿಂದಿತ್ತ ದೌಡಾಯಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಒಂದು ಗುಂಪು ಕುರ್ಚಿಗಳನ್ನೆಲ್ಲ ಮುರಿದಿಕ್ಕಿತು. ಮತ್ತೊಂದು ಗುಂಪು ಟಿವಿ ಪ್ರೊಜೆಕ್ಟರ್ ಪುಡಿಪುಡಿ ಮಾಡಿ ಎಸೆಯಿತು. ಪೈಮಾಮ್ ನಿಸ್ಸಹಾಯಕರಾಗಿ ಎದೆಎದೆ ಬಡಿದುಕೊಂಡರು. ಗಲಭೆ ಕಾಡ್ಗಿಚ್ಚಿನಂತೆ ಊರಿಡೀ ಹರಡಿತು.

ಎರಡೂ ಕೋಮಿನ ಹತ್ತಾರು ಹುಡುಗರನ್ನು ಪೊಲೀಸ್ ವ್ಯಾನಿಗೆ ತುರುಕಿ ಕರೆದೊಯ್ಯಲಾಯಿತು. ಜತೆಗೆ ಕೋಮು ಗಲಭೆಗೆ ಪ್ರಚೋದನೆ ನೀಡಿದ ಕೇಸು ಹಾಕಿ ಪೈಮಾಮರನ್ನೂ ಜೈಲಿಗಟ್ಟಿದರು! ಥಿಯೇಟರ್‌ಗೂ ಬೀಗ ಬಿತ್ತು...

★★★

ಪೈಮಾಮ್ ಕೋರ್ಟಿಗೆ ಅಲೆದೂ ಅಲೆದು ಸುಸ್ತಾದರು. ಸಾಲದ ಮೇಲೆ ಸಾಲ, ಬಡ್ಡಿಯ ಮೇಲೆ ಬಡ್ಡಿಯ ಭಾರಕ್ಕೆ ಹಣ್ಣಾದರು. ಇಬ್ಬರೂ ಸೇರಿ ಟ್ಯೂಷನ್ ಕ್ಲಾಸ್ ಶುರು ಮಾಡೋಣ ಎಂದು ಹೊಸ ಯೋಜನೆಯೊಂದನ್ನು ಹೆಂಡತಿಯ ಮುಂದೆ ತೆರೆದಿಟ್ಟರು. ಗಂಡನ ಹೊಸ ಹೊಸ ಪ್ರಯೋಗಗಳಿಗೆಲ್ಲ ದೂಸರಾ ಮಾತನಾಡದೆ ಜೀವಗೂಡಿಸುತ್ತಿದ್ದ ಪತ್ನಿ ಇದೇ ಮೊದಲ ಬಾರಿಗೆ ತಿರುಗಿ ಬಿದ್ದಳು.

"ಈ ಟ್ಯೂಷನ್ ಗಿಷನ್ ಎಲ್ಲ ಸಿಟಿಲಾಯ್ತು. ಉಪ್ಪಿಟ್ ಕೊಡ್ತೇವೆ, ಗೋಧಿ ಉಂಡೆ ಕೊಡ್ತೇವೆ ಅಂದರೂ ಈ ಹಳ್ಳಿ ಮಕ್ಕಳು ಶಾಲೆಗೆ ಹೋಗಲು ಹಿಂದೆ ಮುಂದೆ ನೋಡ್ತಾರೆ. ಇನ್ನು ದುಡ್ಡು ಕೊಟ್ಟು ನಿಮ್ಮ ಟ್ಯೂಷನ್‌ಗೆ ಯಾರು ಬರ್ತಾರೆ" ಎಂದು ವ್ಯಗ್ರಳಾದಳು. "ಈ ಊರು ಆಮೆ ಥರಾ ತೆವಳ್ತಾ ಇದೆ. ನೀವು ಕುದುರೆ ತರ ಮುಂದಕ್ಕೆ ಓಡ್ತಾ ಇದೀರಿ. ನೀವು ತಿರುಗಿ ನೋಡಿದರೆ ಈ ಆಮೆ ನಿಮ್ಮ ಕಣ್ಣಿಗೂ ಕಾಣಿಸದಷ್ಟು ಹಿಂದೆ ಇರ್ತದೆ. ನೀವು ಫೇಲ್ ಆಗ್ತಾ ಇರೋದೇ ಇಲ್ಲಿ. ಆ ಮಲಯಾಳಿ ನೋಡಿ ನಮ್ಮ ಕಣ್ಣೆದುರಿಗೇ ಹೇಗೆ ಬೆಳೆದುಬಿಟ್ಟ?" ಎಂದು ತಾರ್ಕಿಕವಾಗಿ ವಾದಿಸಿದಳು. ಪೈಮಾಮ್ ಬಾಯಿಂದ ಮಾತೇ ಹೊರಡಲಿಲ್ಲ.

★★★

ಧರೆ ಮುಗಿಲೇ ಒಂದಾದಂತೆ ಧೋ ಧೊ ಮಳೆ ಸುರಿಯುತ್ತಿತ್ತು. ಹೆಂಚುಮನೆಯ ಮುಂದೆಲ್ಲ ಜಲಪಾತದಂತೆ ನೀರು ಸುರಿಯುತ್ತಿತ್ತು. ಮಳೆ ಗಾಳಿಯ ಅಬ್ಬರವನ್ನೂ ಮೀರಿಸಿ ಸಮುದ್ರದ ಅಲೆಗಳು ಸದ್ದು ಮಾಡುತ್ತಿದ್ದವು. ಕಟ್ಟಿಗೆ ಕೋಲಿನ ವಿಶಾಲ ಛತ್ರಿ ಬಿಡಿಸಿ ಪೈಮಾಮ್ ಮನೆಯ ಬಾಗಿಲು ದಾಟಿದರು. ಒಂದು ಕೈಯಲ್ಲಿ ಸೂಟ್‌ಕೇಸ್ ಇತ್ತು. ಪತ್ನಿ ಮತ್ತು ಇಬ್ಬರು ಪುಟ್ಟ ಮಕ್ಕಳೂ ಆ ಛತ್ರಿಯಲ್ಲಿ ನಿಧಾನಕ್ಕೆ ರಸ್ತೆಯತ್ತ ನಡೆಯತೊಡಗಿದರು. ಕಾಂಪೌಂಡ್ ಹೊರಗಿನ ರಸ್ತೆಯಲ್ಲಿ ಕಾರು ನಿಲ್ಲಿಸಿ ಕಾಯುತ್ತಿದ್ದ ಮಲಯಾಳಿ, ಪೈಮಾಮ್ ಕೈಯಲ್ಲಿದ್ದ ಸೂಟ್‌ಕೇಸ್ ಎತ್ತಿಕೊಂಡು ಡಿಕ್ಕಿಯೊಳಗಿಟ್ಟ. ಪೈಮಾಮ್ ಕುಟುಂಬ ಮಲಯಾಳಿಯ ಕಾರಿನೊಳಗೆ ಸೇರಿಕೊಂಡಿತು. ಮುಂದಿನ ಸೀಟಿನಲ್ಲಿ ಕೂತ ಪೈಮಾಮ್ ನಿಡಿದಾಗಿ ಉಸಿರೆಳೆದುಕೊಂಡರು.

ಇಪ್ಪತ್ತು ವರ್ಷಗಳ ಹಿಂದೆ ಈ ವಿಠೋಬ ಪೈ ಹೀಗೆಯೇ ಒಂದು ಸೂಟ್‌ಕೇಸ್ ಹಿಡಿದುಕೊಂಡು ಬಂದಿದ್ದ ಹೆಂಡತಿ ಜತೆ. ಈಗ ಅದೇ ಸೂಟ್‌ಕೇಸ್ ಹಿಡಿದು ಎಲ್ಲೋ ಹೊರಟಿದ್ದಾನೆ ಹೆಂಡತಿ ಮಕ್ಕಳ ಜತೆ...

ಎದುರುಮನೆಯ ಶತಾಯುಷಿ ಹನುಮಂತಜ್ಜ ತನ್ನಷ್ಟಕ್ಕೆ ತಾನೆ ಲೊಚಗೊಟ್ಟಿದ, ಹಲ್ಲಿಯಂತೆ.